ಅಬಕಾರಿ ಇಲಾಖೆ ಮುಚ್ಚುವ ಬಗ್ಗೆ

216 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತಂದು ಅಬಕಾರಿ ಇಲಾಖೆಯನ್ನು ಮುಚ್ಚುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿದ್ದಲ್ಲಿ ಈವರೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಸದ್ಯಕ್ಕೆ ಇರುವುದಿಲ್ಲ.

ಆ) ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕೆರೆಗಳ ಸಂಖ್ಯೆ

217 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆಗಳಿಂದ ಎಷ್ಟು ಸಾವಿರ ಎಕರೆಗೆ ನೀರಿನ ಅನುಕೂಲವಾಗಿದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು) :

ಅ) 36658.

ಆ) 6,80,337 ಹೆಕ್ಟೇರ್ ಪ್ರದೇಶಕ್ಕೆ ನೀರಿನ ಅನುಕೂಲವಾಗಿದೆ.

ತುಂಗಭದ್ರಾ ಜಲಾಶಯನದ ಬಗ್ಗೆ

218 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ತುಂಗಭದ್ರಾ ಪ್ರದೇಶದಲ್ಲಿ 450 ಟಿಎಂಸಿ ನೀರಿದ್ದು ಬಚಾವತ್ ಆಯೋಗ 320 ಟಿಎಂಸಿ ನೀರನ್ನು ಬಳಸಲು ಆದೇಶಕೊಟ್ಟು, ಉಳಿಕೆ 130 ಟಿಎಂಸಿ ನೀರಿನ ಬಗ್ಗೆ ತಮ್ಮ ಸರ್ಕಾರದ ನಿಲುವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

1) ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಪಿನ ಕಲಂ IX(B)ಅನುಸಾರ ಕರ್ನಾಟಕವು ತುಂಗಭದ್ರಾ ಉಪಕೊಳ್ಳದಲ್ಲಿ 295 ಟಿಎಂಸಿ ಪ್ರಮಾಣದಷ್ಟು ನೀರನ್ನು ಉಪಯೋಗಿಸಿಕೊಳ್ಳಬಹುದಾ

ಗಿದೆ. ಇದೇ ಅಂತಿಮ ತೀರ್ಪಿನಲ್ಲಿ ಕಲಂ IX (E) ಅನುಸಾರ ತುಂಗಭದ್ರಾ ಜಲಾಶಯದಿಂದ ನೀರನ್ನು ಒದಗಿಸಲಾಗುತ್ತಿರುವ ಕರ್ನಾಟಕದ ಯೋಜನೆಗಳಿಗೆ 151.49 ಟಿಎಂಸಿ ನೀರನ್ನು ಮತ್ತು ಆಂಧ್ರಪ್ರದೇಶದ ಯೋಜನೆಗಳಿಗೆ 78.51 ಟಿಎಂಸಿ ಮತ್ತು ಪ್ರಮಾಣದಷ್ಟು ನೀರನ್ನು ಅಂದರೆ ಒಟ್ಟು 230 ಟಿಎಂಸಿ ನೀರನ್ನು, ಒದಗಿಸಿದ ನಂತರ ಯಾವುದೇ ವರ್ಷದಲ್ಲಿ ತುಂಗಭದ್ರಾ ಜಲಾಶಯದಲ್ಲಿ ಹೆಚ್ಚುವರಿ ನೀರು ಲಭ್ಯವಿದ್ದಲ್ಲಿ ಈ ಹೆಚ್ಚುವರಿ ನೀರನ್ನು ಕರ್ನಾಟಕವು ತನ್ನ ಯೋಜನೆಗಳಿಗೆ ಉಪಯೋಗಿಸಿಕೊಳ್ಳಬಹುದಾಗಿದೆ. ಆದರೆ, ಇದರಿಂದಾಗಿ ಕರ್ನಾಟಕವು ತುಂಗಭದ್ರಾ ಉಪ ಕೊಳ್ಳದಲ್ಲಿ ಬಳಸಿಕೊಳ್ಳಬಹುದಾದ ನೀರಿನ ಪ್ರಮಾಣವು 320ಟಿಎಂಸಿಯನ್ನು ಮೀರಬಾರದೆಂದು ಸಹ ನ್ಯಾಯಾಧೀಕರಣವು ತನ್ನ ತೀರ್ಪಿನಲ್ಲಿ ಸೂಚಿಸಿದೆ. ಆದಕಾರಣ, ಪ್ರಸ್ತುತ ಜಾರಿಯಲ್ಲಿ ಇರುವ ಸ್ಕೀಮ 'ಎ' ಅನುಸಾರ ಕರ್ನಾಟಕವು ತುಂಗಭದ್ರಾ ಉಪಕೊಳ್ಳದಲ್ಲಿ 320 ಟಿಎಂಸಿಗಿಂತ ಹೆಚ್ಚಿನ ನೀರನ್ನು ಉಪಯೋಗಿಸಿಕೊಳ್ಳುವ ಹಾಗಿಲ್ಲ. ಕೃಷ್ಣಾ ನದಿಯಲ್ಲಿ ಪ್ರತಿ ಜಲ ವರ್ಷದಲ್ಲಿ ಲಭ್ಯವಾಗುವ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಂತಹ ಸ್ಕೀಂ 'ಬಿ' ವ್ಯವಸ್ಥೆಯನ್ನು ಕೃಷ್ಣಾ ನ್ಯಾಯಧೀಕರಣವು ಸೂಚಿಸಿದ್ದರೂ ಸಹ ಈ ವ್ಯವಸ್ಥೆಯನ್ನು ಜಾರಿಗೆ ತರಲು ಅವಶ್ಯವಾಗುವ ಕೃಷ್ಣಾ ಕೊಳ್ಳದ ಪ್ರಾಧಿಕಾರವನ್ನು ರಚಿಸಬೇಕೆಂದು ಸೂಚಿಸಿದೆ. ಈ ಪ್ರಾಧಿಕಾರವು ಕೃಷ್ಣಾ ಕೊಳ್ಳದಲ್ಲಿ ಬರುವ ಮೂರು ರಾಜ್ಯಗಳು ಒಪ್ಪಿದಲ್ಲಿ ಅಥವಾ ಸಂಸತ್ತಿನಲ್ಲಿ ಈ ಬಗ್ಗೆ ಖಾಯಿದೆ ಮಾಡಿದ ನಂತರವೇ ಇಂತಹ ಪ್ರಾಧಿಕಾರವು ಅಸ್ತಿತ್ವಕ್ಕೆ ಬರಬಹುದಾಗಿದೆ. ಸದರಿ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದ ನಂತರ ತುಂಗಭದ್ರಾ ಉಪ ಕೊಳ್ಳದಲ್ಲಿ ಪ್ರಸ್ತುತ ನ್ಯಾಯಾಧೀಕರಣವು ವಿಧಿಸಿರುವ ಮಿತಿಗಳನ್ನು ಬದಲಾಯಿಸುವ ಸಾಧ್ಯತೆ ಇದೆಯೇ ಹೊರತು ಈಗ ಜಾರಿಯಲ್ಲಿರುವ ಸ್ಕೀಮ್ 'ಎ' ಅನುಸಾರ ಕರ್ನಾಟಕವು ತುಂಗಭದ್ರಾ ಉಪಕೊಳ್ಳದಲ್ಲಿ 320 ಟಿಎಂಸಿ ಪ್ರಮಾಣಕ್ಕಿಂತ ಹೆಚ್ಚಿನ ಬಳಕೆಯನ್ನು ಮಾಡುವ ಹಾಗಿಲ್ಲ.

ಬಾದಾಮಿ ತಾಲ್ಲೂಕಿನಲ್ಲಿ ಸವಳು ಹಾಗೂ ಜವಳು ಭೂಮಿಯ ಸುಧಾರಣೆ

219 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಾದಾಮಿ ತಾಲ್ಲೂಕಿನ ಕಾಕನೂರು ಗ್ರಾಮ ಮತ್ತು ಬೆಳವಳಕೊಪ್ಪ ಹಾಗೂ ನೀಲಗುಂದ ಗ್ರಾಮಗಳಲ್ಲಿ ಮಲಪ್ರಭಾ ಎಡದಂಡೆ ನೀರಾವರಿಯಿಂದ ಎಷ್ಟು ಪ್ರದೇಶ ಸವಳು ಹಾಗೂ ಜವಳು ಭೂಮಿಯಾಗಿ ಮಾರ್ಪಟ್ಟಿದೆ.*

ಆ) *ಈ ಸವಳು ಹಾಗೂ ಜವಳು ಭೂಮಿಯ ಸುಧಾರಣೆಗಾಗಿ ಈಗಾಗಲೆ ಸರ್ಕಾರದಿಂದ ಕೈಗೊಂಡ ಕ್ರಮಗಳೇನು?*

ಇ) *ಈ ಕ್ರಮಗಳನ್ನು ಕಾರ್ಯರೂಪಕ್ಕೆ ತರಲು ವಿಳಂಬವೇಕೆ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಕಾಕನೂರು ಗ್ರಾಮದ 261:14 ಹೆಕ್ಟೇರು ನೀಲಗುಂದ ಗ್ರಾಮದ 18 ಹೆಕ್ಟೇರು ಮತ್ತು ಬೆಳವಲಕೊಪ್ಪ ಗ್ರಾಮದ 6 ಹೆಕ್ಕೇರು ಕ್ಷೇತ್ರವು ಸವಳು ಮತ್ತು ಜವಳು ಭೂಮಿಯಾಗಿ ಮಾರ್ಪಟ್ಟಿದೆ.